ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.ಃ 45/2025

.....................................................................

CW 05
PW 04

| | | |
|---|---|---|
| ಹೆಸರು | ಃ | ಮಂಜುನಾಥ ಪಾಟೀಲ್ |
| ತಂದೆಯ ಹೆಸರು | ಃ | ಲಕ್ಷ್ಮಣ |
| ವಯಸ್ಸು | ಃ | 51 ವರ್ಷ |
| ಉದ್ಯೋಗ | ಃ | ಕೃಷಿ ಕೆಲಸ |
| ವಾಸಸ್ಥಳ | ಃ | ನೀರಲಗಾ, ತಾಃ ಹಳಿಯಾಳ. |

ದಿನಾಂಕ 09-12-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರಿಂದ 4, 6 ರಿಂದ 8 ರವರು ಪರಿಚಯ ಇಲ್ಲ. ಆರೋಪಿತನನ್ನು ಈ ಮೊದಲು ನೋಡಿಲ್ಲ.

ನನ್ನ ಹೊಲ ದಾಂಡೇಲಿಯಿಂದ ನೀರಲಗಾ ಗೆ ಹೋಗುವ ದಾರಿಯಲ್ಲಿ ಬರುತ್ತದೆ. ಸುಮಾರು 1 ವರ್ಷದ ಹಿಂದೆ ಪೊಲೀಸರು ನನ್ನಿಂದ ನಾನು ಹೊಲದಲ್ಲಿ ಇದ್ದಾಗ ಸಹಿ ಪಡೆದಿರುತ್ತಾರೆ. ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 23-11-2024 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕ 31-10-2024 ರಂದು ---------------------- ಕೆ ಎಸ್ ಆರ್ ಟಿ ಸಿ ಅಂತಾ ಚಾಲಕನ ಮೇಲೆ ದೂರು ನೀಡಿದ ವಿಷಯ ತಿಳಿಯಿತು ಎಂದು ನುಡಿದಿರುತ್ತೀರಿ ಎಂದರೆ

ಸರಿಯಲ್ಲ. ಸದರಿ ಅಲ್ಲಗಳೆದ ಅವರ ಹೇಳಿಕಯನ್ನು **ನಿಪಿ 9 ಎಂದು** ಗುರುತಿಸಲಾಯಿತು. ಸಾಕ್ಷಿಗೆ ನಿಪಿ 5 ಮತ್ತು 7 ರ ಭಾವಚಿತ್ರವನ್ನು ತೋರಿಸಿ ಅವುಗಳಲ್ಲಿ ಕಾಣುವ ವಾಹನಗಳ ನಡುವೆ ಅಪಘಾತ ವಾಗಿತ್ತು, ಸದರಿ ಅಪಘಾತವನ್ನು ನೀವು ಕಣ್ಣಾರೆ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು** : ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.